SRI T.S. MANI.—Why not the Government think of taking over of private centres ?

SRI G. BASAVANNAPPA.—Sir, the Government is encouraging voluntry organisations to take up such works and that is the reason why we are providing financial assistance to them.

ಸಂಡೂರಿನ ತಾಲ್ಲೂಕಾ ಕಛೇರಿ ಕಟ್ಟಡದ ಬಗ್ಗೆ

೧೦೨ (೩೫೯) ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಕಂದಾಯ ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಸಂಡೂರಿನಲ್ಲಿ ತಾಲ್ಲೂಕು ಕಛೇರಿ ಕಟ್ಟಡವನ್ನು ನಿರ್ಮಿಸಲು ಸರಕಾರದವರು ಯೋಜಿಸಿದ್ದಾರೆಯೇ ?

ಆ) ಹಾಗಿದ್ದಲ್ಲಿ ೧೯೮೫-೮೬ರ ಆಯವ್ಯಯದಲ್ಲಿ ಎಷ್ಟು ಹಣವನ್ನು ಕಟ್ಟಡ ನಿರ್ಮಾಣಕ್ಕಾಗಿ ನಿಗದಿಪಡಿಸಲಾಗಿತ್ತು ?

ಇ) ತಾಲ್ಲೂಕು ಕಛೇರಿ ಕಟ್ಟಡ ನಿರ್ಮಾಣ ಯಾವಾಗಿನಿಂದ ಪ್ರಾರಂಭಿಸಲಾಗುವುದು ಹಾಗೂ ಈ ಕಟ್ಟಡದ ಅಂದಾಜು ವೆಚ್ಚವೆಷ್ಟು ?

ಶ್ರೀ ಎಸ್.ಆರ್. ಬೊಮ್ಮಾಯಿ (ಯೋಜನಾ ಹಾಗೂ ಕಾರ್ಮಿಕ ಕಂದಾಯ ಸಚಿವರು).—

ಅ) ಹೌದು,

ಆ) ಇಲ್ಲ.

ಇ) ರೂ. ೧೮,೫೫ ಲಕ್ಷ, ಕಟ್ಟಡದ ನಿರ್ಮಾಣ ೫ನೇ ಪ್ರಾರಂಭಿಸಲಾಗುವುದು.

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ವರ್ಷದಲ್ಲಿ ೫ ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೇವೆ. ಆದಷ್ಟು ಜಾಗ್ರತೆ ಈ ಕೆಲಸ ಪ್ರಾರಂಭ ಮಾಡುತ್ತೇವೆ.

ಶ್ರೀ ಯು. ಭೂಪತಿ.—ಇಲ್ಲಿಯವರೆಗೆ ಸಂಡೂರು ತಾಲ್ಲೂಕ್ ಆಫೀಸನ್ನು ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿದ್ದಾರೆ. ಬಾಡಿಗೆ ಇಲ್ಲಿಯವರೆಗೆ ಎಷ್ಟು ಕೊಟ್ಟಿದ್ದಾರೆ ? ಒಂದು ತಿಂಗಳಿಗೆ ಬಾಡಿಗೆ ಎಷ್ಟು ನಿಗದಿಯಾಗಿತ್ತು ? ಎಂಬುದನ್ನು ಹೇಳುತ್ತೀರಾ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಆ ವಿವರ ಇಲ್ಲ. ಈ ವರ್ಷ ಕಟ್ಟಡ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಬಜೆಟ್‌ನಲ್ಲಿ ೫ ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೇವೆ.

ಶ್ರೀ ಯು. ಭೂಪತಿ.—ಮೊನ್ನೆ ಇದೇ ರೀತಿ ಪ್ರಶ್ನೆ ಬಂದಾಗ ಲೋಕೋಪಯೋಗಿ ಸಚಿವರು ಉತ್ತರ ಕೊಡುತ್ತಾ ಮಿನಿ ವಿಧಾನಸೌಧ ಕಟ್ಟುವುದಿಲ್ಲ ಎಂದು ಹೇಳಿದರು. ತಾಲ್ಲೂಕು ಕಚೇರಿ ಕಟ್ಟಡದ ಪ್ಲಾನ್ ಕಳುಹಿಸಿದಾಗ ಇದು ಬೇಡ, ಮಿನಿ ವಿಧಾನಸೌಧ ಕಟ್ಟಬೇಕು. ಆ ರೀತಿ ಸ್ಕೆಚ್ ಕಳುಹಿಸಿ ಎಂದು ಲೋಕೋಪಯೋಗಿ ಇಲಾಖೆಗೆ ಪಾಪಸ್ ಕಳುಹಿಸಿದ್ದಾರೆ. ಆ ಕಾರಣದಿಂದ ತಾವು ಮಿನಿ ವಿಧಾನಸೌಧ ಕಟ್ಟುತ್ತೀರಾ ? ಅಥವಾ ಹಳೇ ರೀತಿ ಕಟ್ಟುತ್ತೀರಾ ಎಂಬುದನ್ನು ಹೇಳಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ತಹಸೀಲ್ದಾರ್ ಆಫೀಸಿಗೆ ಅವಶ್ಯವಿದ್ದ ಕಟ್ಟಡ ಕಟ್ಟಬೇಕು, ಅದನ್ನು ಕಟ್ಟುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಲ್ಲೆಲ್ಲಿ ರಾಜ್ಯದಲ್ಲಿ ತಾಲ್ಲೂಕ್ ಆಫೀಸ್ ಕಟ್ಟಡ ಇಲ್ಲ, ಸಬ್‌ಡಿವಿಜನ್ ಆಫೀಸ್ ಇಲ್ಲ, ಡೆಪ್ಯುಟಿ ಕಮಿಷನರ್ ಆಫೀಸ್ ಇಲ್ಲ ಆ ಕಡೆ ಇಂಥ ಕಟ್ಟಡಗಳನ್ನು ಕಟ್ಟಿಸಬೇಕೆಂದು ಸುಮಾರು ೪ ಜಿಲ್ಲೆಯಲ್ಲಿ ಮಂಜೂರಾತಿ ಕೊಟ್ಟು ಕೆಲಸ ಪ್ರಾರಂಭವಾಗಿದೆ. ಕೆಲವು ತಾಲ್ಲೂಕಿನಲ್ಲಿ ಐದಾರು ಕಡೆ ಮಿನಿ ವಿಧಾನಸೌಧ ಎಂದು ಹೆಸರಿಸಿ ಕೆಲಸ ಮಾಡಬೇಕೆಂದಿದ್ದರು. ತಾಲ್ಲೂಕ್ ಆಫೀಸ್, ಡಿಸ್ಟ್ರಿಕ್ಟ್ ಆಫೀಸ್ ಎಂದು ಹೆಸರು ಏತಕ್ಕೆ ಕಲ್ಲಿನ ಕಟ್ಟಡವನ್ನು ಈ ಟೈಮಿನಲ್ಲಿ ಕಟ್ಟಬೇಕು ಎಂಬ ದೃಷ್ಟಿಯಿಂದ ಮಿನಿ ವಿಧಾನಸೌಧ ಎಂಬ ಹೆಸರನ್ನು ಕೊಟ್ಟಿತ್ತು. ಮೊನ್ನೆ

ದೇವೇಗೌಡರು ಸ್ಟೇಟ್‌ಮೆಂಟ್ ಕೊಟ್ಟಾಗ ಇಂಥ ಕಟ್ಟಡದ ಅವಶ್ಯಕತೆ ಇಲ್ಲ, ಹಣ ಇಲ್ಲ, ಅದಕ್ಕಾಗಿ ಇಂಥ ಕಟ್ಟಡಗಳನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ ಅನೇಕ ತಾಲ್ಲೂಕುಗಳಲ್ಲಿ ಇವತ್ತು ಮುಖ್ಯವಾಗಿ ತಾಲ್ಲೂಕು ಕಚೇರಿ, ಬಿ.ಡಿ.ಓ. ಕಚೇರಿಗಳಿಗೆ ಜನ ಬರುತ್ತಾರೆ, ಅನಂತರ ಎಕ್ಸಿಕ್ಯೂಟಿವ್ ಎಂಜಿನಿಯರ್ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಎಂಜಿನಿಯರ್ ಕಚೇರಿಗೆ ಜನರು ಬರುತ್ತಾರೆ. ಈ ಬಗ್ಗೆ ತಾವು ಸ್ಪಷ್ಟವಾಗಿ ಹೇಳಿ. ಈಗ ಕಟ್ಟಡ ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿ ಕೆಲಸ ಕೈಗೊಳ್ಳುತ್ತೀರೋ ಹೇಗೆ ? ಅಥವಾ ಹಣದ ಕೊರತೆ ಎಂದು ಮುಂದೆ ಹಾಕುತ್ತೀರೋ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಆದ್ಯತೆ ಮೇಲೆ ಖರ್ಚು ಮಾಡತಕ್ಕ ನೀತಿ ಇದ್ದರೂ ಕೂಡ ಕಂದಾಯ ಇಲಾಖೆಗೆ ಕಚೇರಿಗಳು ಬೇಕಾಗುತ್ತವೆ. ಆ ದೃಷ್ಟಿಯಿಂದ ಎಲ್ಲೆಲ್ಲಿ ಕಚೇರಿಗಳು ಇಲ್ಲವೋ ಅಲ್ಲಿ ಕಟ್ಟುತ್ತೇವೆ.

ಪ್ರಶ್ನೆ ನಂಬರ್ ೪೧೩ ಮಾನ್ಯ ಸದಸ್ಯರು ಗೈರುಹಾಜರಿ

ಉತ್ತರ ಕನ್ನಡ ಜಿಲ್ಲೆಯಲ್ಲಿ ಅನಧಿಕೃತವಾಗಿ ಮಾಡಿರುವ ಹಾಗೂ ಸಾಗುವಳಿ

೧೦೫ (೧೨) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಕಂದಾಯ ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ೧೫–೨೦ ವರ್ಷಗಳಿಂದ ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ, ಸಿದ್ದಾಪುರ ತಾಲ್ಲೂಕಿನಲ್ಲಿ ಅನೇಕ ಮಂದಿ ಬಡವರು ಅನಧಿಕೃತವಾಗಿ ಮನೆ ಕಟ್ಟಿಕೊಂಡು ಹಾಗೂ ಜಮೀನನ್ನು ಸಾಗುವಳಿ ಮಾಡುತ್ತಾ ಬಂದಿರುವ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಸದರಿ ಅತಿ ಕ್ರಮಣವನ್ನು ಸಕ್ರಮಗೊಳಿಸಲು ಸರ್ಕಾರದವರು ಕೈಕೊಂಡ ಕ್ರಮವೇನು ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ಕಾರ್ಮಿಕ ಸಚಿವರು).—

ಅ) ಸದರಿ ವಿಷಯವು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ, ಸಿದ್ದಾಪುರ ತಾಲ್ಲೂಕುಗಳಲ್ಲಿಯೆ ಅತಿ ಕ್ರಮಣಗಳನ್ನು ಸಕ್ರಮಗೊಳಿಸಲು ಕೈಗೊಂಡ ಕ್ರಮದ ಬಗ್ಗೆ ವಿವರ ಈ ಕೆಳಗಿನಂತಿದೆ.

		ಸಿರ್ಸಿ	ಸಿದ್ದಾಪುರ
೧)	ಈವರೆಗೆ ಅತಿಕ್ರಮಣ ಮಾಡಿರುವವರ ಸಂಖ್ಯೆ	೪೯೬	೪೫
೨)	ಈಗಾಗಲೇ ಸಕ್ರಮಗೊಳಿಸಿದ ಅತಿಕ್ರಮಣಗಳ ಸಂಖ್ಯೆ	೧೨೨	೧೮
೩)	ಬಾಕಿ ಇರುವ ಕಡತಗಳ ಸಂಖ್ಯೆ	೩೭೪	೨೭

ಸರ್ಕಾರದ ಸುತ್ತೋಲೆ ಕ್ರ : ಆರ್‌ಡಿ ೫೨ ಎಲ್‌ಜಿಪಿ ೮೧ ದಿನಾಂಕ ೬–೮–೮೧ರ ಪ್ರಕಾರ ೧–೯–೭೭ರ ಕ್ಕಿಂತ ಮೂರು ವರ್ಷ ಪೂರ್ವದಲ್ಲಿ ಅತಿಕ್ರಮಣ ಮಾಡಿ, ಅತಿಕ್ರಮಣಕಾರರು ಹೆಚ್ಚಳ ಪಡಿ ಖರ್ಚು ಮಾಡಿ, ಮನೆ ಕಟ್ಟಿಕೊಂಡಿದ್ದರೆ ಮತ್ತು ಸದರಿ ಕಟ್ಟಡಗಳನ್ನು ಕೆಡವಿದರೆ ಅಪಾರ ಹಾನಿ ಸಂಭವಿಸುತ್ತಿದ್ದ ಪಕ್ಷದಲ್ಲಿ ಸಕ್ರಮಗೊಳಿಸಬಹುದಾಗಿದೆ, ಬಾಕಿ ಉಳಿದಿರುವ ಪ್ರಕರಣಗಳು ಸದರಿ ಸುತ್ತೋಲೆಯ ಪರಿಮಿತಿಗೆ ಬರುವುದಿಲ್ಲವಾದ್ದರಿಂದ ಬಾಕಿ ಉಳಿದಿರುತ್ತದೆ.

೧೯೮೪ರ ವರೆಗಿನ ಅತಿಕ್ರಮಣಗಳನ್ನು ಸಕ್ರಮಗೊಳಿಸುವ ಬಗ್ಗೆ ಕಾಯ್ದೆಗೆ ಸೂಕ್ತ ತಿದ್ದುಪಡಿ ಮೊರಡಿಸುವ ಬಿಲ್ಲು ಸರ್ಕಾರದ ಪರಿಶೀಲನೆಯಲ್ಲಿದೆ.